"ಹಲವು ಮಣಿಗಳನ್ನು ಪೋಣಿಸುವ ಒಂದೇ ದಾರದಂತೆ ನಾನೇ ಎಲ್ಲ ಧರ್ಮಗಳಲ್ಲೂ ಇದ್ದೇನೆ." ಹೀಗಾಗಿ ತಮ್ಮ ಧರ್ಮದಲ್ಲಿ ಮಾತ್ರವೇ ಮುಕ್ತಿ ಎಂದು ಹಿಂದೂಗಳು ಎಂದಿಗೂ ನಂಬಿಲ್ಲ.

**ವಿಶ್ವಧರ್ಮದ ಪ್ರತಿಪಾದನೆ:** ತಮ್ಮ ಪ್ರಬಂಧದ ಕಡೆಯ ಭಾಗದಲ್ಲಿ, ವಿಶ್ವಧರ್ಮದ ಪರಿಕಲ್ಪನೆಯನ್ನು ಸ್ವಾಮೀಜಿ ಮುಂದಿಡುತ್ತಾರೆ: "ಜಗತ್ತಿನಲ್ಲಿ ಎಂದಾದರೂ ಒಂದು ವಿಶ್ವಧರ್ಮವೆನ್ನುವುದು ಅಸ್ತಿತ್ವಕ್ಕೆ ಬರುವುದಾದರೆ, ಅದು ಕಾಲ ದೇಶಗಳ ಎಲ್ಲೆಯನ್ನು ಮೀರಿರುವಂಥದ್ದಾಗಿರಬೇಕು. ಅದು ತಾನು ಯಾವ ದೇವರನ್ನು ಕುರಿತು ಬೋಧಿಸುತ್ತದೆಯೋ, ಆ ದೇವರಷ್ಟೇ ಅನಂತವಾಗಿರಬೇಕು... ಯಾರು ಹಿಂದೂಗಳ ಬ್ರಹ್ಮನೋ, ಜರತುಷ್ಟ್ರರ ಅಹೂರ-ಮಜ್ದನೋ, ಬೌದ್ಧರ ಬುದ್ಧನೋ, ಯಹೂದ್ಯರ ಯಹೋವನೋ, ಕ್ರೈಸ್ತರ ಸ್ವರ್ಗದಲ್ಲಿರುವ ತಂದೆಯೋ – ಅವನು ನಿಮಗೆ ಈ ಉದಾತ್ತ ಭಾವನೆಯನ್ನು ಕಾರ್ಯಗತಗೊಳಿಸುವ ಶಕ್ತಿಯನ್ನು ನೀಡಲಿ."

### ಇತರ ಪ್ರವಚನಗಳು

**ಎರಡು ಪ್ರವಚನಗಳ ಸಾರಾಂಶ:** ಸ್ವಾಮೀಜಿ ಸರ್ವಧರ್ಮ ಸಮ್ಮೇಳನದ ಮುಂದಿನ ದಿನಗಳಲ್ಲಿ ಮತ್ತೆ ಮೂರು ಉಪನ್ಯಾಸಗಳನ್ನು ಮಾಡಿದರು. ೧೮೯೩ರ ಸೆಪ್ಟೆಂಬರ್ ೨೦ ರಂದು ಮಾಡಿದ ಭಾಷಣದಲ್ಲಿ ಭಾರತಕ್ಕೆ ಕ್ರೈಸ್ತ ಮಿಷನರಿಗಳನ್ನು ಕಳುಹಿಸುತ್ತಿರುವುದನ್ನು, "ಪೂರ್ವದೇಶಗಳ ಅಗತ್ಯ ಮತಧರ್ಮವಲ್ಲ, ಅವರಲ್ಲಿ ಅದು ಯಥೇಚ್ಛವಾಗಿದೆ" ಎಂದು ಟೀಕಿಸುತ್ತಾರೆ.

೧೮೯೩ರ ಸೆಪ್ಟೆಂಬರ್ ೨೬ರಂದು ಮಾಡಿದ ಭಾಷಣದಲ್ಲಿ, ಬೌದ್ಧ ಮತ್ತು ಹಿಂದೂಧರ್ಮಗಳ ಅವಿನಾಭಾವ ಸಂಬಂಧವನ್ನು ಪ್ರತಿಪಾದಿಸುತ್ತಾರೆ. ಬುದ್ಧ ಹಿಂದೂಧರ್ಮದ ಸಾಫಲ್ಯರೂಪ; ಅದರ ತಾರ್ಕಿಕ ಸಿದ್ಧಾಂತವೇ, ಅದರ ತಾರ್ಕಿಕ ಬೆಳವಣಿಗೆಯೇ ಅವನು. ಹಿಂದೂಗಳು ಬುದ್ಧನನ್ನು ಅವತಾರವೆಂದು ಪೂಜಿಸುತ್ತಾರೆ; ಆದರೆ ಬೌದ್ಧರು ಬುದ್ಧನ ಉಪದೇಶಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ ಎಂದು ಸ್ವಾಮೀಜಿ ಖೇದ ವ್ಯಕ್ತಪಡಿಸುತ್ತಾರೆ. ಕಡೆಯಲ್ಲಿ, ಅವುಗಳ ಸಾಮರಸ್ಯದ ಆವಶ್ಯಕತೆಯ ಬಗ್ಗೆ ಸ್ವಾಮೀಜಿ ಹೀಗೆ ಒತ್ತಿ ಹೇಳುತ್ತಾರೆ: "ಹಿಂದೂಧರ್ಮ ಬೌದ್ಧಧರ್ಮವಿಲ್ಲದೆ ಬಾಳಲಾರದು. ಬೌದ್ಧಧರ್ಮವೂ ಅಷ್ಟೇ, ಹಿಂದೂಧರ್ಮದ ನೆರವಿಲ್ಲದೆ ಬಾಳಲಾರದು.. ಬೌದ್ಧರು ಮತ್ತು ಬ್ರಾಹ್ಮಣರ ನಡುವೆ ಮೂಡಿದ ಕಂದಕ ಭಾರತದ ಅವನತಿಗೆ ಕಾರಣವಾಯಿತು... ಆದ್ದರಿಂದ ಬ್ರಾಹ್ಮಣನ ಅದ್ಭುತ ಧೀಶಕ್ತಿ ಮತ್ತು ಮಹಾಚಾರ್ಯನಾದ ಬುದ್ಧನ ಹೃದಯ ವೈಶಾಲ್ಯ ಹಾಗೂ ಅತಿ ಉನ್ನತ, ಅದ್ಭುತವಾದ ವಿಶ್ವಾನುಕಂಪ – ಇವುಗಳನ್ನು ಸಂಗಮಗೊಳಿಸೋಣ."

**ಧರ್ಮದಲ್ಲಿ ಬೆಳವಣಿಗೆಯ ನಿಯಮ:** ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದ ಕೊನೆಯ ದಿವಸ ಅಂದರೆ, ೧೮೯೩ ರ ಸೆಪ್ಟೆಂಬರ್ ೨೭ ರಂದು ಮಾಡಿದ ಭಾಷಣ ಅತ್ಯಂತ ಹೃದಯಸ್ಪರ್ಶಿಯಾದದ್ದು. ಮೊದಲು ಈ ಸರ್ವಧರ್ಮ ಸಮ್ಮೇಳನವನ್ನು ಯಶಸ್ವಿಗೊಳಿಸಿದ ಎಲ್ಲರಿಗೂ ವಂದನೆಗಳನ್ನು ಸ್ವಾಮೀಜಿ ಸಲ್ಲಿಸುತ್ತಾರೆ. ಧಾರ್ಮಿಕ ಐಕ್ಯತೆಯ ಸಮಾನಭೂಮಿಕೆ ಯಾವುದಾಗಿರಬೇಕು ಎಂಬ ಪ್ರಶ್ನೆಯನ್ನು ಎತ್ತಿಕೊಳ್ಳುವ ಸ್ವಾಮೀಜಿ, ಅಂಥ ಐಕ್ಯತೆ, ಒಂದು ಧರ್ಮದ ವಿಜಯದಿಂದ, ಇತರ ಧರ್ಮಗಳ ನಾಶದಿಂದ ಸಾಧಿತವಾಗುವುದಿಲ್ಲ ಎಂದು ಎಚ್ಚರಿಕೆ ನೀಡುತ್ತಾರೆ. ಒಂದು ಗಿಡಕ್ಕೆ ತನ್ನದೇ ಆದ ಬೆಳವಣಿಗೆಯ ನಿಯಮವಿದೆ. ಅದೇ ರೀತಿ ಧರ್ಮಕ್ಕೂ ಕೂಡ. ಹೀಗಾಗಿ ಕ್ರೈಸ್ತನಾದವನು ಹಿಂದೂ ಅಥವಾ ಬೌದ್ಧನಾಗಬೇಕಾಗಿಲ್ಲ; ಹಿಂದುವಾಗಲಿ, ಬೌದ್ಧನಾಗಲಿ ಕ್ರೈಸ್ತನಾಗಬೇಕಾಗಿಲ್ಲ. "ಪ್ರತಿಯೊಬ್ಬನೂ ಇತರರ ಮನೋಭಾವವನ್ನು ಗ್ರಹಿಸಬೇಕು. ಆದರೆ ತನ್ನ ವೈಯಕ್ತಿಕತೆಯನ್ನು ಉಳಿಸಿಕೊಂಡು, ತನ್ನದೇ ಆದ ಬೆಳವಣಿಗೆಯ ನಿಯಮಗಳಿಗೆ ಅನುಸಾರವಾಗಿ ಬೆಳೆಯಬೇಕು."

**ಸರ್ವಧರ್ಮ ಸಮ್ಮೇಳನದ ಸಂದೇಶ:** "ಪಾವಿತ್ರ್ಯ, ಪರಿಶುದ್ಧತೆ, ದಾನ, ದಯೆ – ಇವು ಯಾವುದೇ ಒಂದು ಧರ್ಮದ ಸ್ವಂತ ಆಸ್ತಿ ಅಲ್ಲ; ಪ್ರತಿಯೊಂದು ಧರ್ಮವೂ ಉದಾರಚರಿತರಾದ ಸ್ತ್ರೀಪುರುಷರನ್ನು ರೂಪಿಸಿದೆ... ಯಾರು ಎಷ್ಟೇ ವಿರೋಧಿಸಿದರೂ, ಪ್ರತಿಯೊಂದು ಧರ್ಮದ ಧ್ವಜದ ಮೇಲೂ ಬಹುಬೇಗ ಈ ಮಾತುಗಳು ಬರೆಯಲ್ಪಡುತ್ತವೆ: **'ಹೋರಾಟವಲ್ಲ, ಸೌಹಾರ್ದ', 'ವಿನಾಶವಲ್ಲ, ಸ್ವೀಕಾರ', 'ವೈಮನಸ್ಯವಲ್ಲ, ಸಾಮರಸ್ಯ ಮತ್ತು ಶಾಂತಿ'** " – ಇದೇ ಸರ್ವಧರ್ಮ ಸಮ್ಮೇಳನವು ಜಗತ್ತಿಗೆ ಸಾರಬೇಕಾದ ಸಂದೇಶ ಎಂದು ಸ್ವಾಮೀಜಿ ಹೇಳುತ್ತಾರೆ. ಇದೇ ಭಾರತದ ಮತ್ತು ಹಿಂದೂಧರ್ಮದ ಪರವಾಗಿ ಸ್ವತಃ ಅವರು ಕೂಡ, ಇಡೀ ಜಗತ್ತಿಗೆ ಬೋಧಿಸಬೇಕಾಗಿದ್ದ ಉಪದೇಶವೂ ಆಗಿತ್ತು, ಅಲ್ಲವೇ? ✴

### ಮೊದಲು ದೇಶಭಕ್ತಿ

**"ಒಬ್ಬ ಸಂನ್ಯಾಸಿ ತನ್ನ ದೇಶದ ವಿಷಯದಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಬಾರದು; ಅದಕ್ಕೆ ಬದಲಾಗಿ ಎಲ್ಲ ದೇಶಗಳನ್ನೂ ತನ್ನ ಸ್ವಂತದ್ದೆಂದೇ ಕಾಣಬೇಕು" ಎಂದು ಯಾರೋ ಒಬ್ಬರು ಸ್ವಾಮಿ ವಿವೇಕಾನಂದರಿಗೆ ಹೇಳಿದರು. ಇದಕ್ಕೆ ಸ್ವಾಮೀಜಿ ಹೀಗೆ ಉತ್ತರವಿತ್ತರು: "ತನ್ನ ಸ್ವಂತ ತಾಯಿಯನ್ನು ಪ್ರೀತಿಸಿ, ಆಕೆಯನ್ನು ಪೋಷಿಸಲು ಸಾಧ್ಯವಾಗದವನು, ಬೇರೊಬ್ಬರ ತಾಯಿಗೆ ಹೇಗೆ ತಾನೇ ಸಹಾಯ ಮಾಡಿಯಾನು?" ಸ್ವಾಮೀಜಿಯವರ ಮಾತಿನ ಅರ್ಥವೆಂದರೆ ಸಂನ್ಯಾಸಿಗಳು ಕೂಡ ತಮ್ಮ ಮಾತೃಭೂಮಿಯನ್ನು ಪ್ರೀತಿಸುವುದನ್ನು ಕಲಿಯಬೇಕು ಎಂದು. ತನ್ನ ದೇಶವನ್ನೇ ಪ್ರೀತಿಸಲಾರದಂತವನು, ಜಗತ್ತನ್ನು ಆದರಿಸಲು ಹೇಗೆ ತಾನೇ ಸಾಧ್ಯ? ಮೊದಲು ಬರಬೇಕಾದ್ದು ದೇಶಭಕ್ತಿ. ನಂತರವಷ್ಟೇ ವಿಶ್ವಾತ್ಮಕ ದೃಷ್ಟಿ ಮೂಡಬಲ್ಲುದು.** *(ಸಂಗ್ರಹ)*

ಸ್ವಾಮಿ ಗೌರಾಂಗಾನಂದ

ಅನುವಾದ : ಡಾ. ರಮಾ ಬೆಣ್ಣೂರ್



# ಕೈಲಾಸ ಮಾನಸ ಸರೋವರ : ನಿಸರ್ಗದ ಸ್ವರ್ಗೀಯ ನೋಟ

ಭಕ್ತಿಸಿದ್ಧಾಂತದ ಪ್ರಕಾರ ಸಾಧನೆಗೆ ತೀರ್ಥಯಾತ್ರೆ ಅಥವಾ ತೀರ್ಥದರ್ಶನವು ಬಹುಮುಖ್ಯವಾದುದು. ತೀರ್ಥ ಯಾತ್ರೆಯು ಪರಿಪೂರ್ಣವಾಗಲು ತೀರ್ಥಕ್ಷೇತ್ರಗಳ ಅಥವಾ ಯಾತ್ರಾಸ್ಥಳಗಳ ಪ್ರದಕ್ಷಿಣೆಯು ಅಗತ್ಯವಾದ ಒಂದು ಅಂಗ. ಶ್ರೀರಾಮಕೃಷ್ಣ ಪರಮಹಂಸರ ಪ್ರಕಾರ ತೀರ್ಥಕ್ಷೇತ್ರಗಳು ಭಗವಂತನು ಸುಸ್ಪಷ್ಟವಾಗಿ, ಶಕ್ತಿಯುತವಾಗಿ ಪ್ರಕಟಣೆಗೊಳ್ಳುವ ಸ್ಥಳಗಳು. ಏಕೆಂದರೆ ಅಲ್ಲಿ ಅನಾದಿಕಾಲದಿಂದಲೂ ಭಕ್ತರು ಜಪ, ಧ್ಯಾನ. ತಪಸ್ಸಾಧನೆಗಳ ಮೂಲಕ ಮನಃಪೂರ್ವಕವಾಗಿ ಭಗವಂತನನ್ನು ಕುರಿತು ಚಿಂತಿಸಿರುತ್ತಾರೆ.

ನಾವು ಹಿಮಾಲಯವನ್ನು ತೀರ್ಥಗಳಿಂದ ತುಂಬಿದ ಸ್ಥಳವೆಂದು ಭಾವಿಸುವುದರಿಂದ, ಅದನ್ನು 'ತೀರ್ಥಭೂಮಿ' ಎಂದು ಕರೆಯುತ್ತೇವೆ. ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾದ ಈ ಪುರಾತನ ಪರ್ವತಗಳು ಅಸಂಖ್ಯಾತ ಸಾಧಕರ ಏಕಾಂತವಾಸಕ್ಕೆ ಪ್ರಶಸ್ತವಾದ ಜಾಗವಾಗಿವೆ. ಹಿಮಾಲಯದಲ್ಲಿ ಹರಡಿರುವ ಪವಿತ್ರಸ್ಥಳಗಳಲ್ಲಿ ಕೈಲಾಸವು ಅತಿ ಉನ್ನತವಾಗಿದ್ದು, ಅತ್ಯಂತ ಶ್ರೇಷ್ಠವಾದುದೆಂದು ಪರಿಗಣಿತ ವಾಗಿದೆ. ಈ ಪವಿತ್ರಸ್ಥಳಕ್ಕೆ ಭೇಟಿ ನೀಡಬೇಕೆಂಬುದು ಭಾರತದ ಪ್ರತಿಯೊಬ್ಬ ಧಾರ್ಮಿಕ ವ್ಯಕ್ತಿಯ ಮನದಾಳದ ಬಯಕೆಯಾಗಿರುತ್ತದೆ. ಕೈಲಾಸಪರ್ವತವು ಶಿವನ ಆವಾಸಸ್ಥಾನ. ನಮ್ಮ ಪುರಾಣಗಳು ಬ್ರಹ್ಮಲೋಕ, ವಿಷ್ಣುಲೋಕ ಮತ್ತು ಶಿವಲೋಕಗಳೆಂಬ ಮೂರು ಲೋಕಗಳನ್ನು ಕುರಿತು ಹೇಳುತ್ತವೆ. ಮೊದಲಿನ ಎರಡೂ ಸೂಕ್ಷ್ಮ ಲೋಕಗಳು; ಮರ್ತ್ಯರಿಂದ ಹೊಂದಲು ಅಸಾಧ್ಯವಾದುವು. ಆದರೆ ಮೂರನೆಯದಾದ, ಶಿವಲೋಕದ ಪ್ರತೀಕವೆನಿಸಿದ ಕೈಲಾಸ ಪರ್ವತದ ಮೂಲಕ ಸಶರೀರರಾಗಿ ಭಕ್ತರು ಸ್ವರ್ಗಾರೋಹಣ ಮಾಡಲು ಸಾಧ್ಯ ಎಂಬ ನಂಬಿಕೆ ಇದೆ.

ಸಶರೀರನಾಗಿಯೇ ಧರ್ಮರಾಯನು ಸ್ವರ್ಗಲೋಕವನ್ನು ಪ್ರವೇಶಿಸಿದ ಎಂದು ಮಹಾಭಾರತವು ತಿಳಿಸುತ್ತದೆ. ಅವನು ತನ್ನ ಪಯಣವನ್ನು ಬದರೀನಾಥದಲ್ಲಿರುವ 'ಸ್ವರ್ಗಾರೋಹಿಣಿ' ಎಂಬಲ್ಲಿಂದ ಆರಂಭಿಸುತ್ತಾನೆ. ಇದು ಅಲ್ಲೇ ಒಂದು ಪರ್ವತ ಶ್ರೇಣಿ ಮಾತ್ರವೇ ದೂರವಿರುವ, ಕೈಲಾಸಪರ್ವತಕ್ಕೆ ಸಾಗುವ ಟಿಬೆಟಿಯನ್ ಕಣಿವೆಯ ಬಳಿ ಇದೆ. ಹೀಗಾಗಿ ಮಹಾಭಾರತವು ಹೇಳುವ ಸ್ವರ್ಗಲೋಕವು ಕೈಲಾಸಪರ್ವತವೇ ಎಂದು ನಾವು ಧಾರಾಳವಾಗಿ ನಿರ್ಣಯಿಸಬಹುದು.

**ಕೈಲಾಸ ಮಾನಸ ಸರೋವರ ಯಾತ್ರೆಯು ತೀರ್ಥಯಾತ್ರೆಗಳಲ್ಲೆಲ್ಲಾ ಅತ್ಯಂತ ರೋಚಕವಾದುದು; ಸ್ಮರಣೀಯ ಅನುಭವವನ್ನು ನೀಡುವಂಥದ್ದು. ಹೈದರಾಬಾದಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿರುವ ಪೂಜ್ಯ ಸ್ವಾಮೀಜಿಯವರ ಅನುಭವಕಥನ ಇದಕ್ಕೆ ಒಂದು ಅಪೂರ್ವ ನಿದರ್ಶನ. ಕನ್ನಡ ಅನುವಾದ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರಾದ ಡಾ. ರಮಾ ಬೆಣ್ಣೂರ್ ಅವರಿಂದ.**

**ಯಾತ್ರೆಗೆ ತಯಾರಿ:** ಭಾರತ ಸರ್ಕಾರದ ವಿದೇಶಾಂಗ ಸಚಿವಾಲಯವು ಯಾತ್ರಿಕರಿಗಾಗಿ ಪ್ರತಿ ವರ್ಷ ಜನವರಿ ತಿಂಗಳಲ್ಲಿ ಈ ಪ್ರವಾಸವನ್ನು ಏರ್ಪಡಿಸುತ್ತದೆ. ದೇಶದ ಪ್ರಮುಖ ದಿನಪತ್ರಿಕೆಗಳಲ್ಲಿ ಈ ವಾರ್ಷಿಕ ಕೈಲಾಸ ಮಾನಸ ಸರೋವರ ಯಾತ್ರೆಯ ವಿವರಗಳು, ಅರ್ಹತೆಯ ನಿಯಮಗಳೊಂದಿಗೆ ಪ್ರಕಟವಾಗುತ್ತವೆ. ಅನಂತರ ಆಯ್ಕೆಯ ಕಲಾಪಗಳು ನಡೆಯುತ್ತವೆ. ಆಯ್ಕೆಯಾದ ಯಾತ್ರಿಕರು ದೆಹಲಿಯಿಂದ ಯಾತ್ರೆಯನ್ನು ಆರಂಭಿಸಬೇಕು. ಈ ಯಾತ್ರೆಯಲ್ಲಿ ಎರಡು ಭಾಗಗಳಿರುತ್ತವೆ. ಮೊದಲನೆಯದು ಮೂರು ದಿನಗಳದ್ದು. ಅದರಲ್ಲಿ ಮೊದಲ ದಿನ ಯಾತ್ರಿಗಳು ದೆಹಲಿಯ ಹೃದಯ ಮತ್ತು ಶ್ವಾಸಕೋಶ ಕೇಂದ್ರದಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಬೇಕಾಗುತ್ತದೆ. ಎರಡನೆಯ ದಿನ ಅವರು ಐ.ಟಿ.ಬಿ.ಪಿ. ಬೇಸ್ ಆಸ್ಪತ್ರೆಯಲ್ಲಿ ಕೊನೆಯ ತಪಾಸಣೆಗಾಗಿ ಹಾಜರಾಗಬೇಕಾಗುತ್ತದೆ. ಅಲ್ಲಿ ಅವರು ಅರ್ಹರೆಂದು ಕಂಡುಬಂದ ನಂತರ ಕಡೆಯದಾಗಿ ವಿದೇಶಾಂಗ ಸಚಿವಾಲಯವಿರುವ ಸೌತ್ ಬ್ಲಾಕಿಗೆ ತೆರಳಬೇಕಾಗುತ್ತದೆ. ಇಲ್ಲಿ ಅವರಿಗೆ ಯಾತ್ರೆಯ ಬಗ್ಗೆ ವಿವರಿಸಲಾಗುತ್ತದೆ. ಎಲ್ಲ ರೀತಿಯ ನಿಯಮಗಳನ್ನು ಅನುಸರಿಸಿದ ನಂತರ ವಿದೇಶಿ ಕರೆನ್ಸಿಯನ್ನು ದೆಹಲಿಯ ಅಶೋಕ ಹೋಟೆಲಿನಲ್ಲಿ ಪಡೆಯಬೇಕು. ಸಂಜೆ ಯಾತ್ರಾರ್ಥಿಗಳಿಗಾಗಿ ದೆಹಲಿ ಸರ್ಕಾರವು ಏರ್ಪಡಿಸುವ ಬೀಳ್ಕೊಡುಗೆಯ ಔತಣಕೂಟದಲ್ಲಿ ಪಾಲ್ಗೊಂಡರೆ, ಮೊದಲ ಭಾಗ ಮುಗಿದಂತೆ.




ಇಪ್ಪತ್ತಾರು ದಿನಗಳನ್ನೊಳಗೊಂಡ ಎರಡನೆಯ ಭಾಗದಲ್ಲಿ ದೆಹಲಿಯಿಂದ ಕೈಲಾಸಪರ್ವತಕ್ಕೆ ಹೋಗಿ ಮತ್ತೆ ಹಿಂತಿರುಗಿ ಹೊರಟ ಜಾಗಕ್ಕೆ ಹಿಂದಿರುಗುವ ಕಾರ್ಯಕ್ರಮ ಸೇರಿರುತ್ತದೆ. ಭಾರತದ ಕಡೆ ಕುಮಾವು ಮಂಡಲ್ ವಿಕಾಸ ನಿಗಮವು (ಕೆ.ಎಂ.ವಿ.ಎನ್) ಹಾದಿಯಲ್ಲಿ ತಂಗುವ ವ್ಯವಸ್ಥೆಗಳ ಏರ್ಪಾಡನ್ನು ಅಲ್ಮೋರಾ, ದಾರ್ಚುಲ, ಗಾಲ, ಬುಧಿ, ಕಾಲಾಪಾನಿ ಮತ್ತು ನಬಿಧಂಗ್‌ಗಳಲ್ಲಿ ಮಾಡುತ್ತದೆ. ಚೀನಾದ ಸರ್ಕಾರವು ಟಿಬೆಟಿನ ಕಡೆ ತಕ್ಲಕೋಟ್, ದಾರ್ಚೇನ್, ದೆರಪುಕ್, ಝಿಂಗ್‌ಜೆರ್ಬು, ಹೋರೆ, ಛಿಯು, ಝ್ಯುದಿಗಳಲ್ಲಿ ತಂಗುವ ವ್ಯವಸ್ಥೆಯನ್ನು ಮಾಡುತ್ತದೆ. ರಕ್ಷಣಾ ವ್ಯವಸ್ಥೆಯನ್ನು ಇಂಡೋ–ಟಿಬೆಟಿಯನ್ ಬಾರ್ಡರ್ ಪೋಲೀಸ್ (ಐ.ಟಿ.ಬಿ.ಪಿ) ನೋಡಿಕೊಳ್ಳುತ್ತದೆ. ಯಾತ್ರಿಗಳ ಪ್ರತಿ ಗುಂಪಿನ ಜೊತೆ ಒಬ್ಬ Liaison Officer (ಸಶಸ್ತ್ರ ಪಡೆಯ ಉನ್ನತ ಅಧಿಕಾರಿ) ಇರುತ್ತಾರೆ. ಇವರ ಬಳಿ Satellite ಫೋನ್ ಇದ್ದು, ಅವರು ಕೆ.ಎಂ. ವಿ. ಎನ್. ಅನ್ನು ಬೇಕಾದ ಹಾಗೆಲ್ಲ ಸಂಪರ್ಕಿಸಲು ಅದು ಸಹಾಯಕವಾಗುತ್ತದೆ. ಇದಲ್ಲದೆ ಪ್ರತಿ ಗುಂಪಿಗೆ ಇಬ್ಬರು ವೈದ್ಯರೂ ಇರುತ್ತಾರೆ. ಕೈಲಾಸಪರ್ವತದ ಪರಿಕ್ರಮಣದ ಆರು ದಿನಗಳನ್ನು ಹೊರತುಪಡಿಸಿ ಮಿಕ್ಕ ಎಲ್ಲೆಡೆಯೂ ಎಸ್.ಟಿ.ಡಿ. ಮತ್ತು ಐ.ಎಸ್.ಡಿ. ಸೌಲಭ್ಯ ಇರುತ್ತದೆ.

**ಕಾಥ್‌ಗೊದಾಮ್:** ಹಿಮಾಲಯದ ತಪ್ಪಲಾದ ಘಜಿಯಾಬಾದ್ ಮತ್ತು ಕಾಥ್‌ಗೊದಾಮ್‌ನಲ್ಲಿ ಶಿವಭಕ್ತರಿಂದ ಯಾತ್ರಿಗಳಿಗೆ ವಿಧಿವತ್ತಾದ ಸ್ವಾಗತವನ್ನು ಕೋರಲಾಗುತ್ತದೆ. ಇಲ್ಲೇ ಯಾತ್ರಿಗಳಿಗೆ ಅಗಾಧ ಹಿಮಾಲಯದ ಪ್ರಥಮ ದರ್ಶನ ಆಗುವುದು. ಇದ್ದಕ್ಕಿದ್ದಂತೆ ಹವಾಮಾನ ಬದಲಾವಣೆ ಆಗಿ ತಣ್ಣನೆಯ ಹವೆಯ ಅನುಭವ ಉಂಟಾಗುತ್ತದೆ. ಭಾರತೀಯ ರೈಲ್ವೇಯ ಕೊನೆಯ ತಾಣ ಕಾಥ್‌ಗೊದಾಮ್. ಅಲ್ಲಿಂದ ಹಿಮಾಲಯ ಪರ್ವತದ ಕುಮಾವು ಪ್ರದೇಶಕ್ಕೆ ಇನ್ನು ರಸ್ತೆಯ ಮಾರ್ಗದಲ್ಲಿ ತೆರಳಬೇಕು. ಗಾಲಬಾಂಕ್ ನದಿಯ ದಡದಲ್ಲಿರುವ ಕಾಥಗೊದಾಮ್‌ನಿಂದ ಬಸ್ಸಿನಲ್ಲಿ ಆಲ್ಮೋರಾದ ಕಡೆಗೆ ಯಾತ್ರಿಗಳು ಪಯಣಿಸುತ್ತಾರೆ.

**ಆಲ್ಮೋರಾ:** ಉತ್ತರಾಖಂಡ ರಾಜ್ಯದಲ್ಲಿರುವ ಆಲ್ಮೋರಾ ನಗರವು ಕುಮಾವು ಪ್ರದೇಶದ ಸಾಂಸ್ಕೃತಿಕ ಕೇಂದ್ರ ಎನಿಸಿದೆ. ಇದು ಹಿಮಾಲಯದ ಕುಮಾವು ಪರ್ವತ ಶ್ರೇಣಿಯ ದಕ್ಷಿಣದ ತುದಿಯಲ್ಲಿರುವ ಒಂದು ಗುಡ್ಡದ ಮೇಲೆ ಇದೆ. ಕುದುರೆಯ ಜೀನಿನ ಆಕಾರದಲ್ಲಿರುವ ಈ ದಿಣ್ಣೆಯ ಪ್ರದೇಶವು ದಟ್ಟವಾದ ಕಾಡಿನಿಂದ ಆವೃತವಾಗಿದೆ. ನಗರದ ಎರಡೂ ಬದಿಗಳಲ್ಲಿ ಕೋಶಿ ಮತ್ತು ಸುಯಾಲ್ ನದಿಗಳು ಹರಿಯುತ್ತವೆ. ಸ್ವಾಮಿ ವಿವೇಕಾನಂದರು ಈ ಸುಂದರ ಪರಿಸರದ ಬಗ್ಗೆ ಹೀಗೆ ನುಡಿಯುತ್ತಾರೆ:

“ಈ ಪರ್ವತಗಳು ನಮ್ಮ ಜನಾಂಗದ ಅತ್ಯುತ್ತಮ ಸ್ಮರಣೆಗಳೊಡನೆ ಬೆಸುಗೆ ಹೊಂದಿವೆಯಾದ್ದರಿಂದ ಇಲ್ಲಿ ಬರೀ ಚಟುವಟಿಕೆಗಳಷ್ಟೇ ಅಲ್ಲದೆ, ಪ್ರಶಾಂತ ವಾತಾವರಣವಿರುವ


ಐ.ಟಿ.ಬಿ.ಪಿ. ಠಾಣೆ

ಒಂದು ಧ್ಯಾನಕೇಂದ್ರ ಕೂಡ ಇರಬೇಕು. ಯಾರಾದರೂ ಅದನ್ನು ಮನಗಾಣುವರೆಂಬ ಭರವಸೆ ನನಗಿದೆ.”

ಯಾತ್ರಿಕರೆಲ್ಲ ಇಲ್ಲಿ ಒಟ್ಟಾಗಿ ಸೇರಿ ಮುಂದಿನ ಯಾತ್ರೆಯ ಶುಭಕ್ಕಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ.

**ಗೋಲು ದೇವತೆ:** ಈಗ ಯಾತ್ರಿಗಳು ಗೋಲು ದೇವತೆಯ ಗುಡಿಗೆ ಬರುತ್ತಾರೆ. ಗೋಲು ದೇವತೆಯು ಕುಮಾವು ಪ್ರದೇಶದ ಪೌರಾಣಿಕ ಹಾಗೂ ಚಾರಿತ್ರಿಕ ದೇವತೆ. ಗೌರ ಭೈರವನ ಅವತಾರವೆಂದು ಪರಿಗಣಿಸಲ್ಪಡುವ ಈ ದೇವ ರನ್ನು ನ್ಯಾಯದೇವತೆಯೆಂದು ಇಲ್ಲಿಯ ಜನರು ಭಾವಿಸಿ ಬಹಳ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಚಾರಿತ್ರಿಕವಾಗಿ ಅವನು ಕತ್ಯೂರಿಯ ರಾಜ ಝಾಲ ರಾಯ್‌ನ ಧೀರ ಮಗ ನೆನ್ನಲಾಗುತ್ತದೆ. ಸುಳ್ಳು ಅನುಮಾನದಿಂದ ಅವನನ್ನು ಬಿನ್ಸಾರ ರಾಜನು ಕೊಂದನೆಂದು ಪ್ರತೀತಿ. ದಾನಗೊಲು ಎಂಬಲ್ಲಿ ಈತನ ಪ್ರಾಚೀನ ಗುಡಿಯು ಇನ್ನೂ ಇದೆ. ಜನರು ತಮ್ಮ ಬೇಡಿಕೆಗಳನ್ನು ಕೈಯಲ್ಲಿ ಬರೆದು ಅಲ್ಲಿ ಕಟ್ಟುತ್ತಾರೆ. ಇಲ್ಲಿ ಪ್ರಾರ್ಥನೆ ಸಲ್ಲಿಸಿ ಯಾತ್ರಿಗಳು ಚಕೌರಿಯ ಕಡೆಗೆ ತಮ್ಮ ಪಯಣವನ್ನು ಮುಂದುವರೆಸುತ್ತಾರೆ.

**ಚಕೌರಿ ಅತಿಥಿ ಗೃಹ:** ಪ್ರಶಾಂತವಾದ ಬೆಟ್ಟಗಳ ಸೌಂದರ್ಯ ದಿಂದ ಚಕೌರಿಯು ಯಾತ್ರಿಕರನ್ನು ಆಕರ್ಷಿಸುತ್ತದೆ. ಕುಮಾವು ಮಂಡಲ್ ವಿಕಾಸ ನಿಗಮವು ಯಾತ್ರಿಗಳು ಇಳಿದುಕೊಳ್ಳಲು ಕಾಟೇಜುಗಳನ್ನು ಒದಗಿಸುತ್ತದೆ. ಮನೋಹರ ದೃಶ್ಯಗಳಿಂದ ಆವೃತವಾದ ಈ ಕಾಟೇಜುಗಳಲ್ಲಿ ವಾಸ ಮಾಡುವುದು ಮನಸ್ಸಿಗೆ ಮುದ ನೀಡುತ್ತದೆ. ಇಲ್ಲಿ ಊಟ ಮುಗಿಸಿ ಮಿರ್ಥಿ ಎಂಬಲ್ಲಿ ಇರುವ ಟಿಬೆಟಿಯನ್ ಬಾರ್ಡರ್ ಪೊಲೀಸ್ ಬೇಸ್ ಕ್ಯಾಂಪಿಗೆ ತೆರಳಬೇಕು. ಇಲ್ಲಿ ಭಾರತೀಯ ಸೇನೆಯ ಸೈನಿಕರು ದಣಿದ ಯಾತ್ರಿಕರಿಗೆ ತಂಪುಪಾನೀಯ, ತಿನಿಸುಗಳನ್ನು ಕೊಟ್ಟು ಆದರಿಸುತ್ತಾರೆ. ಇಲ್ಲಿ ಮುಂದಿನ ಯಾತ್ರೆಯ ವಿವರಗಳನ್ನು ನೀಡಿ, ಅವಶ್ಯಕ ದಾಖಲೆ ಪತ್ರಗಳನ್ನು ಭರ್ತಿ ಮಾಡಿಸಿಕೊಳ್ಳಲಾಗುತ್ತದೆ. ತಾಯ್ನಾಡಿನ ರಕ್ಷಣೆಗಾಗಿ ಎಂತಹ ಕಷ್ಟಗಳನ್ನೂ ಸಹಿಸುವ ನಮ್ಮ ಸೈನಿಕರಿಗೆ ಮನದಲ್ಲೇ ವಂದಿಸಿ, ಅವರೊಡನೆ ಫೋಟೋ ಕ್ಲಿಕ್ಕಿಸಿ ಯಾತ್ರಿಗಳು ಅಲ್ಲಿಂದ ಮುಂದುವರೆಯುತ್ತಾರೆ.

**ದಾರ್ಚುಲಾ :** ನೇಪಾಳಕ್ಕೆ ಹೋಗುವ ರಸ್ತೆಯ ಕೊನೆಯ ಕೊಂಡಿಯಾದ ದಾರ್ಚುಲಾಗೆ ಸಂಜೆಯ ವೇಳೆಗೆ ಯಾತ್ರಿಕರು ಬಂದು ಸೇರುತ್ತಾರೆ. ಪರ್ವತಗಳಿಂದ ಆವೃತವಾಗಿರುವ ಇದು ಪಿಥೋರ್‌ಘರ್‌ನಿಂದ ೯೦ ಕಿ.ಮೀ. ದೂರ ದಲ್ಲಿರುವ ಒಂದು ಪಟ್ಟಣ. ಕಾಳಿ ನದಿಯ ದಡದ ಮೇಲಿರುವ ಇದು ಹಿಂದಿನಿಂದಲೂ ಹಿಮಾಲಯದ ಒಂದು ವ್ಯಾಪಾರಿ ಕೇಂದ್ರ ಕೂಡ ಹೌದು. ಇಲ್ಲಿರುವ ಕೆ.ಎಂ.ವಿ.ಎನ್. ನ ಅತಿಥಿಗೃಹ ಆರಾಮದಾಯಕವಾದುದು. ಕಾಳಿ ನದಿಯ ಇಕ್ಕೆಲಗಳಲ್ಲೂ ಇರುವ ಈ ಪಟ್ಟಣವು ಜಿಲ್ಲಾ ಮುಖ್ಯಕೇಂದ್ರವೂ ಹೌದು. ಒಂದು ಚಿಕ್ಕ ಸೇತುವೆಯ ಮೂಲಕ ಈ ದಡದಿಂದ ಆ ದಡವನ್ನು ತಲುಪಬಹುದು. ಇಲ್ಲಿಂದ ನೇಪಾಳಕ್ಕೂ ಹೋಗಿಬರಬಹುದು.

ಎರಡು ರಾತ್ರಿಗಳ ನಂತರದ ಈ ಮೂರನೆಯ ದಿನ ಯಾತ್ರಿಗಳಿಗೆ ಬಲು ಬಿಡುವಿಲ್ಲದ ದಿನ. ಮುಂದಿನ ಪಯಣಕ್ಕಾಗಿ ಅವಶ್ಯಕ ಕಿರಾಣಿ ಸಾಮಾನುಗಳ ಖರೀದಿ, ಅಡುಗೆಯವರನ್ನು, ಸಹಾಯಕರನ್ನು ಗೊತ್ತುಮಾಡಿಕೊಳ್ಳು ವುದು, ತಮ್ಮ ಸಾಮಾನುಗಳನ್ನು ಕಟ್ಟಿ ತೂಕ ಮಾಡುವುದು – ಇವೆಲ್ಲವನ್ನೂ ಮುಗಿಸಿಕೊಂಡು, ಮುಂದಿನ ಕ್ಯಾಂಪಿಗೆ ಹೊರಡಬೇಕು. ಜೋರಾಗಿ **‘ಹರಹರ ಮಹಾದೇವ’** ಎಂಬ ಘೋಷಣೆಯೊಡನೆ ಎಲ್ಲರೂ ಮಂಗ್ತಿನಾಲಾಗೆ ಬಸ್ಸಿನಲ್ಲಿ ಹೊರಡುತ್ತಾರೆ. ಇದು ಬಸ್ಸಿನಲ್ಲಿ ಯಾತ್ರಿಗಳು ಮಾಡುವ ಕೊನೆಯ ಪಯಣ. ಮಂಗ್ತಿನಾಲಾದಿಂದ ಇಂಡೋ ಟಿಬೆಟಿಯನ್ ಗಡಿಯನ್ನು ಸೇರಲು ಬೆಟ್ಟದ ಮೇಲಕ್ಕೆ ೯೦ ಕಿ.ಮೀ. ನಡೆಯಬೇಕು. ಹಾದಿಯಲ್ಲಿ ಮೈನವಿರೇಳಿಸುವ ಪ್ರಕೃತಿ ಸೌಂದರ್ಯ, ಸುತ್ತಲೂ ಆವರಿಸಿರುವ ಬೆಟ್ಟ ಪ್ರದೇಶ, ಕಣ್ಣಿಗೆ ತಂಪೆರೆಯುವ ಹಸಿರು, ಪರಿಶುದ್ಧವಾದ ಗಾಳಿ. ಚಿರ್ಕಿಲಾ ಹೈಡೆಲ್ ಪ್ರಾಜೆಕ್ಟ್‌ನಿಂದ ಕೇಳಿ ಬರುವ ಕಾಳಿ ನದಿಯ ನೀರಿನ ಸಪ್ಪಳ – ಇವೆಲ್ಲ ಸೇರಿ ಬಲು ಅಪರೂಪದ ದೃಶ್ಯಾನುಭವವನ್ನು ನೀಡುತ್ತವೆ. ಈ ಅಣೆಕಟ್ಟು ಸುಮಾರು ಒಂದು ಕಿ.ಮೀ. ಉದ್ದದ ಒಂದು ಸುಂದರವಾದ ಸರೋವರಕ್ಕೆ ಸೇರಿಕೊಂಡಿದೆ.

**ಭೂಕುಸಿತ:** ಇದ್ದಕ್ಕಿದ್ದಂತೆ ಪ್ರಕೃತಿಯ ಶಾಂತತೆಗೆ ಭಂಗ ಉಂಟಾಗಿ, ಭೂಮಿ ಕುಸಿಯಲಾರಂಭಿಸಿತು. ಇದು ಈ ಯಾತ್ರೆಯ ಒಂದು ಅನಿವಾರ್ಯತೆ. ಸರ್ವಶಕ್ತ ಪ್ರಕೃತಿಮಾತೆಯ